

# ಕರ್ನಾಟಕ ರಾಜ್ಯ ನೈರ್ಮಲ್ಯ ಮತ್ತು ತ್ಯಾಜ್ಯ ನಿರ್ವಹಣಾ ನೀತಿ

**ಕರ್ನಾಟಕ ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ**

August 2019

Website: www.rdpr.nic.in

# I. ಪ್ರಸ್ತಾವನೆ ಮತ್ತು ಹಿನ್ನೆಲೆ

*'ನೈರ್ಮಲ್ಯವು ರಾಜಕೀಯ ಸ್ವಾತಂತ್ರ್ಯಕ್ಕಿಂತ ಹೆಚ್ಚು ಮಹತ್ವಪೂರ್ಣ –ಮಹಾತ್ಮ ಗಾಂಧಿ*

1.1. ಬಯಲು ಬಹಿರ್ದೆಸೆ ಅಭ್ಯಾಸ, ವೈಯಕ್ತಿಕ ಸ್ವಚ್ಛತೆಯ ಕೊರತೆ, ಘನ ಮತ್ತು ದ್ರವ ತ್ಯಾಜ್ಯಗಳ ಸೂಕ್ತವಾದ ಸಂಸ್ಕರಣದ ಕೊರತೆ– ಗ್ರಾಮೀಣ ಪ್ರದೇಶಗಳಲ್ಲಿ ಸಾರ್ವಜನಿಕ ಆರೋಗ್ಯ, ಮಕ್ಕಳ ಮರಣ, ಲಿಂಗ ನ್ಯಾಯಪರತೆ, ಪರಿಸರ ಮತ್ತು ಆರ್ಥಿಕ ಸ್ಥಿತಿಗತಿಗಳ ಮೇಲೆ ದುಷ್ಪರಿಣಾಮವನ್ನು ಬೀರಿದೆ. ವಿಶೇಷವಾಗಿ ಆರೋಗ್ಯದ ದೃಷ್ಠಿಯಿಂದ, ಘನ ಮತ್ತು ದ್ರವ ತ್ಯಾಜ್ಯದ (SLWM- Solid & Liquid Waste) ದೋಷಪೂರ್ಣ ವಿಲೇವಾರಿಯು ಜಲಮೂಲ ಕಾಯಿಲೆಗಳಾದ ಆಮಶಂಕೆ, ಮಲೇರಿಯಾ, ಡೆಂಗ್ಯೂ, ಕಾಲರ ಮತ್ತು ವಿಷಮಶೀತ ಜ್ವರಗಳ ಉತ್ಪತ್ತಿಗೆ ಕಾರಣವಾಗಿದೆ. ಗ್ರಾಮೀಣ ಪ್ರದೇಶಗಳಲ್ಲಿ ಸುಮಾರು ಶೇ 88% ರಷ್ಟು ಕಾಯಿಲೆಗಳು ಶುದ್ಧ ಕುಡಿಯುವ ನೀರು ಮತ್ತು ನೈರ್ಮಲ್ಯದ ಕೊರತೆ, ಅಸಮರ್ಪಕ ಘನ ಮತ್ತು ದ್ರವ ತ್ಯಾಜ್ಯ ನಿರ್ವಹಣೆಯಿಂದಾಗಿ[1] ತಲೆದೋರುತ್ತವೆಯೆಂದು ಅಂದಾಜು ಮಾಡಲಾಗಿದೆ. ವಿಶೇಷವಾಗಿ ಐದು ವರ್ಷಗಳಿಗೂ ಕಡಿಮೆ ವಯೋಮಾನದ ಮಕ್ಕಳು, ಚಿಕ್ಕ ವಯಸ್ಸಿನ ಬಾಲಕಿಯರು ಮತ್ತು ಮಹಿಳೆಯರನ್ನು ಒಳಗೊಂಡಂತೆ ದುರ್ಬಲ ಹಾಗೂ ಅಂಚಿನಲ್ಲಿರುವ ಸಮುದಾಯಗಳ ಮೇಲೆ ಹೆಚ್ಚಿನ ಮಟ್ಟದ ಆರೋಗ್ಯ ಮತ್ತು ಸಾಮಾಜಿಕ ಪರಿಣಾಮಗಳುಂಟಾಗುತ್ತವೆ.

1.2 ಮೇಲಿನ ಅಂಶಗಳ ಹಿನ್ನೆಲೆಯಲ್ಲಿ 2ನೇ ಅಕ್ಟೋಬರ್, 2014 ರಂದು ಸಂಪೂರ್ಣ ಸಾರ್ವತ್ರಿಕ ನೈರ್ಮಲ್ಯದ ಗುರಿಯನ್ನು ಮುಟ್ಟುವ ಮತ್ತು ಮಹಾತ್ಮ ಗಾಂಧಿಯವರ 150ನೇ ಜನ್ಮದಿನವಾದ ಅಕ್ಟೋಬರ್ 2, 2019 ರೊಳಗೆ ಭಾರತದಾದ್ಯಂತ ಸ್ವಚ್ಛತೆಯನ್ನು ಸಾಧಿಸುವ ಉದ್ದೇಶದಿಂದ ಸ್ವಚ್ಛ ಭಾರತ ಅಭಿಯಾನವನ್ನು ಪ್ರಾರಂಭಿಸಲಾಯಿತು. ಸ್ವಚ್ಛ ಭಾರತ ಅಭಿಯಾನವು ಎರಡು ಉಪ–ಅಭಿಯಾನಗಳನ್ನು ಹೊಂದಿದ್ದು ಅವುಗಳೆಂದರೆ, ಕುಡಿಯುವ ನೀರು ಮತ್ತು ನೈರ್ಮಲ್ಯ ಮಂತ್ರಾಲಯದಿಂದ ನಿರ್ವಹಿಸಲ್ಪಡುವ ಸ್ವಚ್ಛ ಭಾರತ ಮಿಷನ್ (ಗ್ರಾಮೀಣ) ('ಎಸ್‌ಬಿಎಂ–ಜಿ') ಮತ್ತು ವಸತಿ ಮತ್ತು ನಗರ ವ್ಯವಹಾರಗಳಿಂದ (ಎಂಒಎಚ್‌ಯುಎ) ನಿರ್ವಹಿಸಲ್ಪಡುವ ಸ್ವಚ್ಛ ಭಾರತ ಮಿಷನ್(ನಗರ) ಕಾರ್ಯಕ್ರಮಗಳು ಕೆಳಕಂಡ ಉದ್ದೇಶಗಳನ್ನು ಹೊಂದಿರುತ್ತದೆ:

(i) ಗ್ರಾಮೀಣ ಪ್ರದೇಶಗಳಲ್ಲಿ ಬಯಲು ಬಹಿರ್ದೆಸೆಯನ್ನು ನಿರ್ಮೂಲನೆ ಮಾಡಿ, ಸಂಪೂರ್ಣ ಸ್ವಚ್ಛತೆ ಹಾಗೂ ನೈರ್ಮಲ್ಯವನ್ನು ಸಾಧಿಸಿ, ಈ ಮೂಲಕ ಸಾಮಾನ್ಯ ಜೀವನ ಮಟ್ಟದಲ್ಲಿ ಸುಧಾರಣೆಯನ್ನು ತರುವುದು

(ii) ಅಕ್ಟೋಬರ್ 2, 2019 ರೊಳಗೆ ಸ್ವಚ್ಛ ಭಾರತ ಅಭಿಯಾನವನ್ನು ಸಾಧಿಸುವ ಸಲುವಾಗಿ ಗ್ರಾಮೀಣ ಪ್ರದೇಶಗಳಲ್ಲಿ ಸಂಪೂರ್ಣ ನೈರ್ಮಲ್ಯದ ವ್ಯಾಪ್ತಿಯನ್ನು ಹೆಚ್ಚಿಸುವುದು

(iii) ಸಮುದಾಯಗಳು ಮತ್ತು ಪಂಚಾಯತ್ ರಾಜ್ ಸಂಸ್ಥೆಗಳಲ್ಲಿ ಆರೋಗ್ಯದ ಕುರಿತಾಗಿ ಅರಿವು ಮೂಡಿಸುವ ಮೂಲಕ ಸುಸ್ಥಿರ ನೈರ್ಮಲ್ಯದ ಅಭ್ಯಾಸಗಳನ್ನು ಪ್ರೋತ್ಸಾಹಿಸುವುದು

(iv) ಸುರಕ್ಷಿತ ಹಾಗೂ ಸುಸ್ಥಿರ ನೈರ್ಮಲ್ಯವನ್ನು ಸಾಧಿಸುವ ಉದ್ದೇಶದಿಂದ ಪರಿಸರ ಸ್ನೇಹಿ, ಹಾಗೂ ಕಡಿಮೆ ವೆಚ್ಚದ ಸಮರ್ಪಕ ತಂತ್ರಜ್ಞಾನವನ್ನು ಅಳವಡಿಸಲು ಪ್ರೋತ್ಸಾಹ ನೀಡುವುದು

(v) ಗ್ರಾಮೀಣ ಪ್ರದೇಶಗಳಲ್ಲಿ ಒಟ್ಟಾರೆ ಸ್ವಚ್ಛತೆಯನ್ನು ಕಾಪಾಡುವ ಸಲುವಾಗಿ ವೈಜ್ಞಾನಿಕ ಘನ ಮತ್ತು ದ್ರವ ತ್ಯಾಜ್ಯ ನಿರ್ವಹಣಾ ವ್ಯವಸ್ಥೆಯನ್ನು ಗಮನದಲ್ಲಿರಿಸಿಕೊಂಡು ಅಗತ್ಯವಿರುವೆಡೆಯಲ್ಲಿ ಸಮುದಾಯ ನಿರ್ವಾಹಿತ ನೈರ್ಮಲ್ಯ ವ್ಯವಸ್ಥೆಯನ್ನು ಅಭಿವೃದ್ಧಿ ಪಡಿಸುವುದು.

(vi) ದುರ್ಬಲ ಸಮುದಾಯಗಳಲ್ಲಿ ನೈರ್ಮಲ್ಯ ವ್ಯವಸ್ಥೆಯನ್ನು ಉತ್ತಮಗೊಳಿಸುವ ಮೂಲಕ ಲಿಂಗ ಸಮಾನಾಧಾರಿತವಾಗಿ ನೈರ್ಮಲ್ಯತೆಯನ್ನು ಸಾಧಿಸುವುದು ಹಾಗೂ ಸಾಮಾಜಿಕ ಭಾಗವಹಿಸುವಿಕೆಯನ್ನು ಉತ್ತಮಗೊಳಿಸುವುದು

1.3. ಆ ತರುವಾಯ 2016ರಲ್ಲಿ, ಪರಿಸರ, ಅರಣ್ಯ ಮತ್ತು ಹವಾಮಾನ ಬದಲಾವಣಾ ಮಂತ್ರಾಲಯವು ಘನ ತ್ಯಾಜ್ಯ ನಿರ್ವಹಣಾ ನಿಯಮಗಳು, 2016ನ್ನು (**'ಎಸ್‌ಡಬ್ಲ್ಯೂಎಂ ನಿಯಮಗಳು'**) ಮತ್ತು ಪ್ಲಾಸ್ಟಿಕ್ ತ್ಯಾಜ್ಯ ನಿರ್ವಹಣಾ ನಿಯಮಗಳು, 2016 (**'ಪಿಡಬ್ಲ್ಯೂಎಂ ನಿಯಮಗಳು"**) ನ್ನು ಪ್ರಕಟಿಸಿದ್ದು ಇದು ಗ್ರಾಮೀಣ ಪ್ರದೇಶಗಳಲ್ಲಿ ಪ್ಲಾಸ್ಟಿಕ್ ತ್ಯಾಜ್ಯವೂ ಸೇರಿದಂತೆ ಘನ ತ್ಯಾಜ್ಯ ನಿರ್ವಹಣೆ ಕುರಿತಂತೆ ರಾಜ್ಯದ (ಸರ್ಕಾರದ) ನಿರ್ದಿಷ್ಟ ಕರ್ತವ್ಯಗಳು ಮತ್ತು ಹೊಣೆಗಾರಿಕೆಗಳನ್ನು ಒಳಗೊಂಡಿರುತ್ತದೆ. ಇದರೊಂದಿಗೆ, ಭಾರತ ಸಂವಿಧಾನದ 73 ನೆಯ ತಿದ್ದುಪಡಿ ಮತ್ತು ಪಂಚಾಯತ್ ರಾಜ್ ಅಧಿನಿಯಮ, 1993(**'ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ') ಗಳ ತಿದ್ದುಪಡಿಯನ್ವಯ**

[1] ಮೂಲ ಪುಸ್ತಕ: ಗ್ರಾಮೀಣ ಪ್ರದೇಶಗಳಲ್ಲಿ ಘನ ಮತ್ತು ದ್ರವ ತ್ಯಾಜ್ಯ ನಿರ್ವಹಣೆ ಕುರಿತಂತೆ ಕುಡಿಯುವ ನೀರು ಮತ್ತು ನೈರ್ಮಲ್ಯ ಮತ್ರಾಲಯ, ಸ್ವಚ್ಛ ಭಾರತ ಅಭಿಯಾನ(ಗ್ರಾಮೀಣ) ಏಪ್ರಿಲ್, 2015.

ಗ್ರಾಮೀಣ ಪ್ರದೇಶಗಳಲ್ಲಿ ನೀರು ಮತ್ತು ನೈರ್ಮಲ್ಯವು ಗ್ರಾಮ ಪಂಚಾಯತಿಯ ಪ್ರಮುಖ ಜವಾಬ್ದಾರಿಯಾಗಿರುತ್ತದೆ ಆದ್ದರಿಂದ, ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮದೊಂದಿಗೆ ಎಸ್ ಬಿಎಂ(ಜಿ) ಮಾರ್ಗಸೂಚಿಗಳು, ಎಸ್‌ಡಬ್ಲ್ಯೂಎಂ ನಿಯಮಗಳು ಮತ್ತು ಪಿಡಬ್ಲ್ಯೂಎಂ ನಿಯಮಗಳು ಗ್ರಾಮೀಣ ಪ್ರದೇಶಗಳಲ್ಲಿ ನೈರ್ಮಲ್ಯ ಮತ್ತು ಘನ ಮತ್ತು ದ್ರವ ತ್ಯಾಜ್ಯ ನಿರ್ವಹಣಾ ಉಪಬಂಧಗಳಿಗೆ ನಿಯಂತ್ರಕ ಚೌಕಟ್ಟಾಗಿ ಕಾರ್ಯ ನಿರ್ವಹಿಸುತ್ತವೆ.

## I. ಕರ್ನಾಟಕದಲ್ಲಿ ಪ್ರಗತಿ

2.1 ಕರ್ನಾಟಕ ರಾಜ್ಯದಲ್ಲಿ 30 ಜಿಲ್ಲಾ ಪಂಚಾಯತಿಗಳು, 176 ತಾಲ್ಲೂಕು ಪಂಚಾಯತಿಗಳು ಮತ್ತು 6024 ಗ್ರಾಮ ಪಂಚಾಯತಿಗಳಿವೆ. ಮೊದಲನೆಯ ಹೆಜ್ಜೆಯಾಗಿ ಕರ್ನಾಟಕ ರಾಜ್ಯವು ಎಲ್ಲ ಗ್ರಾಮ ಪಂಚಾಯತಿಗಳನ್ನು ಬಯಲು ಬಹಿರ್ದೆಸೆ ಮುಕ್ತವನ್ನಾಗಿಸುವತ್ತ ದೃಷ್ಟಿಯನ್ನು ಕೇಂದ್ರೀಕರಿಸಿದೆ. 2012–13ನೇ ಸಾಲಿನಲ್ಲಿ ನಡೆಸಿದ ಸೀಮಾರೇಖಾ ಸಮೀಕ್ಷೆಯನ್ವಯ (baseline Survey) 45,42,655 ಮನೆಗಳು ಶೌಚಾಲಯಗಳನ್ನು ಹೊಂದಿರಲಿಲ್ಲ. ನವೆಂಬರ್, 2018 ರಲ್ಲಿ ಅಗತ್ಯವಿದ್ದ 45,42,655 ಶೌಚಾಲಯಗಳ ನಿರ್ಮಾಣದ ನಂತರ ಬಯಲು ಶೌಚಮುಕ್ತವೆಂದು ಘೋಷಿಸಲ್ಪಟ್ಟಿತು. ಎಸ್‌ಬಿಎಂ(ಜಿ) ಮಾರ್ಗಸೂಚಿಯನ್ವಯ, ಬಯಲು ಶೌಚ ಮುಕ್ತವೆಂದು ಘೋಷಿಸಲಾದ ನಂತರ, ಒಡಿಎಫ್ + ಕಾರ್ಯಚಟುವಟಿಕೆಗಳಾದ ನೀರಿನ ಮೂಲಗಳ ಮತ್ತು ಸಾರ್ವಜನಿಕ ಜಲ ಮೂಲಗಳ ಸ್ವಚ್ಛತೆ, ವಿಕೇಂದ್ರೀಕೃತ ಘನ ಮತ್ತು ದ್ರವ ತ್ಯಾಜ್ಯ ನಿರ್ವಹಣೆ, ಚರಂಡಿಗಳು, ಶಾಲೆಗಳು ಮತ್ತು ಅಂಗನವಾಡಿ ಶೌಚಾಲಯಗಳ ನಿರ್ವಹಣೆ, ಕೈ ತೊಳೆಯುವಿಕೆ ಮತ್ತು ವೈಯಕ್ತಿಕ ಸ್ವಚ್ಛತೆ, ಶೌಚಗುಂಡಿಗಳನ್ನು ತೆರವುಗೊಳಿಸುವಿಕೆ ಕುರಿತ ತರಬೇತಿ, ಮಲಕೆಸರು (ರೊಜ್ಜು) ನಿರ್ವಹಣೆ (Faecal Sludge Management) ಇತ್ಯಾದಿಗಳನ್ನು ಕೈಗೊಳ್ಳಬೇಕು. ಕರ್ನಾಟಕ ರಾಜ್ಯವು 100% ಬಯಲು ಬಹಿರ್ದೆಸೆ ಮುಕ್ತವಾದ ಹಿನ್ನೆಲೆಯಲ್ಲಿ, ಮುಂದಿನ ಯೋಜನೆಯಾಗಿ ಒಡಿಎಫ್ ಪ್ಲಸ್ ಚಟುವಟಿಕೆಗಳನ್ನು ಕೈಗೊಳ್ಳಲು ಪ್ರಸ್ತಾವಿಸಲಾಗಿದ್ದು, ಈ ಮೂಲಕ ಗ್ರಾಮಗಳಲ್ಲಿ ಸಂಪೂರ್ಣ ನೈರ್ಮಲ್ಯ ಸಾಧಿಸಲು ಅವಶ್ಯವಿರುವ ವೈಯಕ್ತಿಕ ಸ್ವಚ್ಛತೆಯ ಅಭ್ಯಾಸ, ಮಲ ತ್ಯಾಜ್ಯದ ಸುರಕ್ಷಿತ ಹಾಗೂ ಸೂಕ್ತ ವಿಲೇವಾರಿ, ತ್ಯಾಜ್ಯ ನೀರಿನ ಸಂಸ್ಕರಣೆ ಹಾಗೂ ವೈಜ್ಞಾನಿಕ ರೀತಿಯ ಘನ ತ್ಯಾಜ್ಯ ನಿರ್ವಹಣೆ ಮುಂತಾದ ನೈರ್ಮಲ್ಯಗಳ ಮೇಲೆ ಹೆಚ್ಚಿನ ಗಮನ ಹರಿಸಬೇಕಾಗಿರುತ್ತದೆ.

2.2 ಎಸ್‌ಬಿಎಂ (ಜಿ) ಮಾರ್ಗಸೂಚಿಗಳನ್ವಯ, ಕಾರ್ಯಕ್ರಮವನ್ನು ಅನುಷ್ಠಾನಗೊಳಿಸುವ ಕುರಿತಾಗಿ ನಿರ್ದಿಷ್ಟ ಸವಾಲುಗಳನ್ನು, ಅಗತ್ಯಗಳನ್ನು ಮತ್ತು ಚಾಲನಾ ಸಮತೋಲನೆಯನ್ನು ಗಮನದಲ್ಲಿಟ್ಟುಕೊಂಡು ಅನುಷ್ಠಾನದ ಚೌಕಟ್ಟನ್ನು ಅಭಿವೃದ್ಧಿ ಪಡಿಸುವ ಅಗತ್ಯವಿದೆ. ಈ ಅನುಷ್ಠಾನದ ಚೌಕಟ್ಟಿನ ಭಾಗವಾಗಿ ಮತ್ತು ಎಸ್‌ಡಬ್ಲ್ಯೂಎಂ ನಿಯಮಗಳ ಮತ್ತು ಪಿಡಬ್ಲ್ಯೂಎಂ ನಿಯಮಗಳ ಅಗತ್ಯಕ್ಕನುಗುಣವಾಗಿ, ಕರ್ನಾಟಕ ರಾಜ್ಯವು ಗ್ರಾಮೀಣ ಪ್ರದೇಶಗಳಲ್ಲಿ ನೈರ್ಮಲ್ಯ ಮತ್ತು ತ್ಯಾಜ್ಯ ನಿರ್ವಹಣೆಗಾಗಿ ಈ ರಾಜ್ಯ ನೀತಿಯನ್ನು (**'ಕರ್ನಾಟಕ ಗ್ರಾಮೀಣ ನೈರ್ಮಲ್ಯ ನೀತಿ'**) ಅಳವಡಿಸಿಕೊಳ್ಳಲು ಪ್ರಸ್ತಾಪಿಸಿರುತ್ತದೆ ಮತ್ತು ಇದರಲ್ಲಿ ಮಾರ್ಗದರ್ಶಿ ಸಿದ್ಧಾಂತಗಳು ಮತ್ತು ವಿಧಾನ, ದೀರ್ಘಕಾಲಿಕ ದೃಷ್ಟಿಕೋನ, ಗುರಿಗಳು ಮತ್ತು ಗುರಿಗಳನ್ನು ಸಾಧಿಸಲು ಕಾಲಮಿತಿಗಳನ್ನು ಒಳಗೊಂಡಿರುತ್ತದೆ. ಈ ನೀತಿಯೊಂದಿಗೆ, ಕರ್ನಾಟಕ ರಾಜ್ಯವು ಕರ್ನಾಟಕ ಗ್ರಾಮೀಣ ನೈರ್ಮಲ್ಯ ನೀತಿಯ ಅನುಷ್ಠಾನಕ್ಕಾಗಿ ರಾಜ್ಯ ಮಟ್ಟದ ಕಾರ್ಯತಂತ್ರವನ್ನು ಅಳವಡಿಸಿಕೊಳ್ಳಲು ಉದ್ದೇಶಿಸಿರುತ್ತದೆ. ರಾಜ್ಯ ಕಾರ್ಯತಂತ್ರವು, ಇತರೆ ಕಾರ್ಯತಂತ್ರಗಳೊಂದಿಗೆ, ಶೌಚಾಲಯಗಳ ಮಾರ್ಪಾಡು ಮಾಡಲು ಬೇಕಾದ ತಂತ್ರಜ್ಞಾನ ಕುರಿತ ಮಾರ್ಗದರ್ಶನ, ಘನ ಮತ್ತು ದ್ರವ ತ್ಯಾಜ್ಯ ನಿರ್ವಹಣೆ, ಆರ್ಥಿಕ ಮೂಲಗಳ ಯೋಜನೆ, ವಿವಿಧ ಕಾರ್ಯನಿರ್ವಾಹಕರುಗಳ ಪಾತ್ರಗಳು ಮತ್ತು ಹೊಣೆಗಾರಿಕೆಗಳು, ಮಾಹಿತಿ ಶಿಕ್ಷಣ ಮತ್ತು ಸಂವಹನ, ಮತ್ತು ನಡವಳಿಕೆಗಳಲ್ಲಿ ಬದಲಾವಣೆಗಳ ಸಂವಹನ, ಸಾಮರ್ಥ್ಯ ವರ್ಧನೆ, ಮೇಲ್ವಿಚಾರಣೆ ಮತ್ತು ಮೌಲ್ಯಮಾಪನ ಇತ್ಯಾದಿಗಳನ್ನು ಒಳಗೊಂಡಿರುತ್ತದೆ. ಮುಂದುವರಿದು, ಗ್ರಾಮ ಪಂಚಾಯತಿಗಳು ಅಳವಡಿಸಿಕೊಳ್ಳಬೇಕಾಗಿರುವ ಮಾದರಿ ಉಪ–ವಿಧಿಗಳು ಈ ನೀತಿಯಲ್ಲಿ ಒಳಗೊಂಡಿರುವಂತಹ ಸಿದ್ಧಾಂತಗಳು ಮತ್ತು ರಾಜ್ಯ ಕಾರ್ಯತಂತ್ರಗಳಿಗೆ ಜಾರಿ ನೀಡುವ ತಂತ್ರವಾಗಿ ಕಾರ್ಯ ನಿರ್ವಹಿಸುತ್ತದೆ. ಆದ್ದರಿಂದ, ಕರ್ನಾಟಕ ಗ್ರಾಮೀಣ ನೈರ್ಮಲ್ಯ ನೀತಿಯು ರಾಜ್ಯ ಕಾರ್ಯತಂತ್ರ ಮತ್ತು ಮಾದರಿ ಉಪ–ವಿಧಿಗಳೊಂದಿಗೆ ರಾಜ್ಯದಲ್ಲಿನ ಗ್ರಾಮೀಣ ಪ್ರದೇಶಗಳಲ್ಲಿ ನೈರ್ಮಲ್ಯ ಮತ್ತು ತ್ಯಾಜ್ಯ ವಿಲೇವಾರಿಯ ಮೂಲಭೂತ ಸೌಕರ್ಯಗಳು ಮತ್ತು ಸಂಸ್ಕರಣೆ ಮಾಡುವ ನಿಟ್ಟಿನಲ್ಲಿ ಮಹತ್ವಪೂರ್ಣ ಸುಧಾರಣೆಯನ್ನು ತರುವ ತೀರ್ಮಾನ ಕೈಗೊಳ್ಳುವ ಚೌಕಟ್ಟಾಗಿ ಕಾರ್ಯ ನಿರ್ವಹಿಸುತ್ತದೆ.

2.3. ನೈರ್ಮಲ್ಯ ಸಾಧಿಸುವ ಮತ್ತು ಘನತ್ಯಾಜ್ಯ ನಿರ್ವಹಣೆಯ ಪ್ರಮುಖ ಹೊಣೆಗಾರಿಕೆಯು ಗ್ರಾಮ ಪಂಚಾಯತಿಗಳಲ್ಲಿ ವಿಕೇಂದ್ರೀಕೃತ ಹಂತದಲ್ಲಿ ನಿಹಿತವಾಗಿದ್ದು, ಕರ್ನಾಟಕ ಸರ್ಕಾರವು ಇತರ ಯುಕ್ತ ಸರ್ಕಾರಿ ಪ್ರಾಧಿಕಾರಗಳೊಂದಿಗೆ ನೀತಿಗಳು ಮತ್ತು ನಿಯಮಗಳನ್ನು ರೂಪಿಸುವ ಮೂಲಕ ಗ್ರಾಮ ಪಂಚಾಯತಿಗಳಿಗೆ ಕಾರ್ಯಸಾಧ್ಯತೆಯ ಅಂತರನಿಧಿ ಒದಗಿಸುವ(providing grap funding), ತರಬೇತಿ, ತಾಂತ್ರಿಕ ಸಹಾಯ ಹಾಗೂ ಇನ್ನಿತರ ಸಾಮರ್ಥ್ಯ ವರ್ಧನಾ ಬೆಂಬಲವನ್ನು ಒದಗಿಸುವ ಮೂಲಕ ಸೌಲಭ್ಯಗಳನ್ನು ಒದಗಿಸುತ್ತದೆ.

2.4 ಅಪಾಯಕಾರಿ ತ್ಯಾಜ್ಯಗಳು, ಜೈವಿಕ–ವೈದ್ಯಕೀಯ ತ್ಯಾಜ್ಯಗಳು, ಇ–ತ್ಯಾಜ್ಯಗಳು, ನಿರ್ಮಾಣ ಮತ್ತು ಕಟ್ಟಡ ಕೆಡವಿದ ತ್ಯಾಜ್ಯಗಳು ಮತ್ತು ಕೈಗಾರಿಕಾ ತ್ಯಾಜ್ಯಗಳು(ಘನ ಮತ್ತು ದ್ರವಾಂಶಗಳು) ಕರ್ನಾಟಕ ಗ್ರಾಮೀಣ ನೈರ್ಮಲ್ಯ ನೀತಿಯ ವ್ಯಾಪ್ತಿಗೆ ಒಳಪಡುವುದಿಲ್ಲ, ಏಕೆಂದರೆ ಅವುಗಳು ವಿಭಿನ್ನ ನಿಯಮಗಳಡಿಯಲ್ಲಿ ನಿರ್ವಹಿಸಲ್ಪಡುತ್ತವೆ ಮತ್ತು ಅವುಗಳು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ವ್ಯಾಪ್ತಿಗೆ ಒಳಪಡದಂತಹ ಪ್ರಾಧಿಕಾರಗಳಿಂದ ಆಡಳಿತ ನಿರ್ವಹಿಸಲ್ಪಡುತ್ತವೆಯೆಂದು ಸ್ಪಷ್ಟೀಕರಿಸಲಾಗಿದೆ.ಒಂದು ವೇಳೆ ಅನ್ವಯವಾಗುವಂತಹ ಕಾಯಿದೆಗಳ ಮಾರ್ಪಾಡುಗಳಿಂದಾಗಿ ಈ ವಿಧದ ತ್ಯಾಜ್ಯಗಳೂ ಗ್ರಾಮ ಪಂಚಾಯತಿಯ ವ್ಯಾಪ್ತಿಗೆ ಒಳಪಡುವುದಿದ್ದಲ್ಲಿ, ಈ ಮೇಲೆ ವಿವರಿಸಲಾದ ವಿವಿಧ ತ್ಯಾಜ್ಯದ ಮೂಲಗಳನ್ನು ಸಹ ಸೇರಿಸಲು ಕರ್ನಾಟಕ ಗ್ರಾಮೀಣ ನೈರ್ಮಲ್ಯ ನೀತಿಯನ್ನು ವಿಸ್ತರಿಸಲಾಗುವುದು.

## III ದೃಷ್ಟಿಕೋನ, ಗುರಿಗಳು ಮತ್ತು ಉದ್ದೇಶಗಳು

### 3.1 ದೃಷ್ಟಿಕೋನ

**ಗ್ರಾಮೀಣ ಪ್ರದೇಶಗಳಲ್ಲಿ ಸುಧಾರಿತ ಸಾರ್ವಜನಿಕ ಆರೋಗ್ಯ, ಸ್ವಚ್ಛ ಪರಿಸರ, ಮತ್ತು ಹೆಚ್ಚು ಸಂಪನ್ಮೂಲಗಳನ್ನು ಪಡೆಯುವ ನಿಟ್ಟಿನಲ್ಲಿ ಗ್ರಾಮೀಣ ಕರ್ನಾಟಕದ ಪ್ರತಿಯೊಬ್ಬ ವ್ಯಕ್ತಿಗೂ ಸಹ ಸುರಕ್ಷಿತ, ಕೈಗೆಟುಕುವ, ಸುಸ್ಥಿರ ನೈರ್ಮಲ್ಯ ಮತ್ತು ತ್ಯಾಜ್ಯ ನಿರ್ವಹಣೆಯನ್ನು ಒದಗಿಸುವುದು**

### 3.2 ಘನ ತ್ಯಾಜ್ಯ ನಿರ್ವಹಣೆಗೆ ಸಂಬಂಧಿಸಿದಂತೆ ಗುರಿಗಳು ಮತ್ತು ಉದ್ದೇಶಗಳು

I. ಮಾಚ್, 2020 ರೊಳಗೆ ಒಟ್ಟು ಗ್ರಾಮ ಪಂಚಾಯತಿಗಳ ಪೈಕಿ ಶೇ 20% ರಷ್ಟರಲ್ಲಿ, ಮಾರ್ಚ್, 2012 ರೊಳಗೆ ಒಟ್ಟು ಗ್ರಾಮ ಪಂಚಾಯತಿಗಳ ಪೈಕಿ ಶೇ 50% ರಷ್ಟರಲ್ಲಿ ಮತ್ತು ಮಾರ್ಚ್, 2022 ರೊಳಗೆ ಒಟ್ಟು ಗ್ರಾಮ ಪಂಚಾಯತಿಗಳ ಪೈಕಿ ಶೇ 100% ರಷ್ಟರಲ್ಲಿ ಜೈವಿಕ ವಿಘಟನೀಯ ತ್ಯಾಜ್ಯವನ್ನು (bio-degradable waste) ಮೂಲದಲ್ಲಿಯೇ ವಿಂಗಡಣೆ ಮತ್ತು ಸಂಸ್ಕರಣೆಯನ್ನು ಸಾಧಿಸುವುದು.

II. ಮಾರ್ಚ್, 2020 ರೊಳಗೆ ಒಟ್ಟು ಗ್ರಾಮ ಪಂಚಾಯತಿಗಳ ಪೈಕಿ ಶೇ 20% ರಷ್ಟರಲ್ಲಿ, ಮಾರ್ಚ್, 2012 ರೊಳಗೆ ಒಟ್ಟು ಗ್ರಾಮ ಪಂಚಾಯತಿಗಳ ಪೈಕಿ ಶೇ 50% ರಷ್ಟರಲ್ಲಿ ಮತ್ತು ಮಾರ್ಚ್, 2022 ರೊಳಗೆ ಒಟ್ಟು ಗ್ರಾಮ ಪಂಚಾಯತಿಗಳ ಪೈಕಿ ಶೇ 100% ರಷ್ಟರಲ್ಲಿ ಭೂಭರ್ತಿಗೆ ಮಾಡುವ ಸಾಗಾಣಿಕೆಯನ್ನು ಕಡಿತಗೊಳಿಸುವ ದೃಷ್ಟಿಯನ್ನಿಟ್ಟುಕೊಂಡು ಜೈವಿಕ ಅವಿಘಟನೀಯ ತ್ಯಾಜ್ಯಗಳನ್ನು (bio non-degradable waste) ಮರುಬಳಕೆ ಮಾಡಲಾಗುವುದು, ಮರು ಆವರ್ತಿಸಲಾಗುವುದು ಅಥವಾ ಸಂಸ್ಕರಣೆ ಮಾಡಲಾಗುವುದು.

III. ರಾಜ್ಯದ ಎಲ್ಲಾ ಗ್ರಾಮೀಣ ಪ್ರದೇಶಗಳಲ್ಲಿ ಕರ್ನಾಟಕ ಸರ್ಕಾರದ ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಇಲಾಖೆಯು ಪ್ಲಾಸ್ಟಿಕ್ ವಸ್ತುಗಳ ಬಳಕೆಯನ್ನು ನಿಷೇಧಿಸಿ ಹೊರಡಿಸಿರುವ ಆದೇಶದ ಪರಿಣಾಮಕಾರಿ ಅನುಷ್ಠಾನ.

IV. ಗ್ರಾಮೀಣ ಪ್ರದೇಶಗಳ ನೈಸರ್ಗಿಕ ಪರಿಸರವನ್ನು ಸಂರಕ್ಷಿಸುವ ಸಲುವಾಗಿ ತೆರೆದ ಸ್ಥಳಗಳಲ್ಲಿ ಯಾವುದೇ ತ್ಯಾಜ್ಯವನ್ನು ರಾಶಿ ಹಾಕತದ್ದಲ್ಲ ಅಥವಾ ಸುಡತಕ್ಕದ್ದಲ್ಲವೆಂಬುದನ್ನು ಖಾತ್ರಿ ಪಡಿಸುವುದು.

V. ಮಾರ್ಚ್, 2022ರೊಳಗೆ ತಾಲ್ಲೂಕು ಅಥವಾ ಜಿಲ್ಲಾ ಮಟ್ಟಗಳಲ್ಲಿ ಗ್ರಾಮೀಣ ಮತ್ತು ನಗರ ಪ್ರದೇಶಗಳ ನಡುವೆ ಒಣ ತ್ಯಾಜ್ಯ ನಿರ್ವಹಣೆಯ ಒಗ್ಗೂಡುವಿಕೆ.

VI. ತೀವ್ರ ಮಾಹಿತಿ ಶಿಕ್ಷಣ ಮತ್ತು ಸಂವಹನ(ಐಇಸಿ) ಮತ್ತು ನಡವಳಿಕೆ ಬದಲಾವಣೆ, ಸಂವಹನ (ಬಿಬಿಸಿ) ಕಾರ್ಯಚಟುವಟಿಕೆಗಳ ಮೂಲಕ ತ್ಯಾಜ್ಯ ವಿಲೇವಾರಿಯ 4 ಆರ್ ಸಮೀಕರಣ (ಎಂದರೆ ಇಳಿಕೆ, ಮರುಬಳಕೆ ಮರುಆವರ್ತನ ಮತ್ತು ಹಿಂಪಡೆಯುವಿಕೆ) ಬೋಧನೆ

VII. ಅಸಮರ್ಪಕ ಘನ ಮತ್ತು ದ್ರವ ತ್ಯಾಜ್ಯ ನಿರ್ವಹಣೆಯಿಂದ ಪರಿಸರ ಹಾಗೂ ಸ್ಥಳೀಯ ಜನತೆಯ ಆರೋಗ್ಯದ ಮೇಲೆ ಉಂಟಾಗುವ ದುಷ್ಪರಿಣಾಮಗಳ ಇಳಿಕೆಯೊಂದಿಗೆ ಗ್ರಾಮೀಣ ಪ್ರದೇಶದಲ್ಲಿ ಸುಧಾರಿತ ಮಟ್ಟದ ನೈರ್ಮಲ್ಯ.

## 3.3. ನೈರ್ಮಲ್ಯ ಮತ್ತು ದ್ರವ ತ್ಯಾಜ್ಯ ನಿರ್ವಹಣೆಯ ಗುರಿಗಳು ಮತ್ತು ಉದ್ದೇಶಗಳು

I. ಶೌಚಾಲಯಗಳನ್ನು ನಿರ್ಮಿಸುವ ಮೂಲಕ ಬಯಲು ಬಹಿರ್ದೆಸೆಯನ್ನು ನಿರ್ಮೂಲ ಮಾಡುವುದು ಮತ್ತು ಸಮುದಾಯ ಪಾಲ್ಗೊಳ್ಳುವಿಕೆ ಹಾಗೂ ಜಾಗೃತಿ ಮೂಡಿಸುವ ಮೂಲಕ ಈ ಸೌಲಭ್ಯಗಳ ಸುಸ್ಥಿರ ಬಳಕೆ. ಗ್ರಾಮೀಣ ಪ್ರದೇಶದಲ್ಲಿ ಪ್ರತಿಯೊಂದು ಹೊಸ ಮನೆಗಳಿಗೂ ಸಹ ನೂತನ ಶೌಚಾಲಯಗಳನ್ನು ನಿರ್ಮಾಣ ಮಾಡುವ ಮೂಲಕ ಶೇ 100%ರಷ್ಟು ಬಯಲು ಬಹಿರ್ದೆಸೆ ಮುಕ್ತತೆಯ ಸ್ಥಿತಿಯನ್ನು ನಿರ್ವಹಿಸಲಾಗುವುದು

II. ಸುರಕ್ಷಿತ ವೈಯಕ್ತಿಕ ಹಾಗೂ ಸಾರ್ವಜನಿಕ ಸ್ವಚ್ಛತಾ ಕ್ರಮಗಳನ್ನು ಅನುಸರಿಸುವ ಮೂಲಕ ಸಾರ್ವಜನಿಕ ಆರೋಗ್ಯ ಮತ್ತು ನೈರ್ಮಲ್ಯ ಕಾರ್ಮಿಕರ (ಸ್ವಚ್ಛತಾ ಕರ್ಮಚಾರಿಗಳು) ಆರೋಗ್ಯದಲ್ಲಿ ಸುಧಾರಣೆ ತರುವುದು.

III. ಸುರಕ್ಷಿತ ಸಂಗ್ರಹಣೆ, ಸಾಗಾಣಿಕೆ, ಸಂಸ್ಕರಣೆ ಮತ್ತು ವಿಲೇವಾರಿಯ ಮೂಲಕ ಮಾನವ ಮಲವನ್ನು ಪರಿಸರಕ್ಕೆ ಒಡ್ಡದಿರುವುದನ್ನು ಖಾತ್ರಿ ಪಡಿಸತಕ್ಕದ್ದು. ತತ್ಸಂಬಂಧವಾಗಿ, ಕರ್ನಾಟಕ ರಾಜ್ಯವು ಎಲ್ಲಾ ಏಕ ಗುಂಡಿ ಶೌಚಾಲಯಗಳನ್ನು 2025 ರೊಳಗೆ ಎರಡು ಗುಂಡಿಗಳಾಗಿ ಮಾರ್ಪಡಿಸಲು ಅಥವಾ ಇತರ ಯಾವುದೇ ಅಂಗೀಕಾರಾರ್ಹವಾದ ಮಾದರಿಯ ನಿಯಂತ್ರಕಗಳನ್ನು ಖಾತ್ರಿ ಪಡಿಸತಕ್ಕದ್ದು, ಶೇ 100% ರಷ್ಟು ಮಲದ ಕೆಸರಿನ ಮತ್ತು ಕೊಳಚೆ ನೀರಿನ ನಿಯಂತ್ರಣ ಮತ್ತು ಸಂಸ್ಕರಣೆಯನ್ನು (ಎ) 2021 ರೊಳಗೆ ಶೇ 5% ಗ್ರಾಮ ಪಂಚಾಯತಿಗಳಲ್ಲಿ ಪೂರ್ಣಗೊಳಿಸಲಾಗುವುದು (ಬಿ) 2022 ರೊಳಗೆ ಶೇ 20% ಗ್ರಾಮ ಪಂಚಾಯತಿಗಳಿಂದ ಪೂರ್ಣಗೊಳಿಸಲಾಗುವುದು (ಸಿ)2023 ರೊಳಗೆ ಶೇ35% ರಷ್ಟುಗ್ರಾಮ ಪಂಚಾಯತಿಗಳಲ್ಲಿ ಪೂರ್ಣಗೊಳಿಸಲಾಗುವುದು (ಡಿ) 2024 ರೊಳಗೆ ಶೇ 70% ರಷ್ಟು ಗ್ರಾಮ ಪಂಚಾಯತಿಗಳಲ್ಲಿ ಪೂರ್ಣಗೊಳಿಸಲಾಗುವುದು ಮತ್ತು (ಇ) 2025 ರೊಳಗೆ ಶೇ 100% ರಷ್ಟು ಗ್ರಾಮ ಪಂಚಾಯತಿಗಳಲ್ಲಿ ಪೂರ್ಣಗೊಳಿಸಲಾಗುವುದು.

IV. ಸಮರ್ಪಕ ಮತ್ತು ಕಡಿಮೆ ವೆಚ್ಚದ, ಕನಿಷ್ಟ ನಿರ್ವಹಣೆ ಮತ್ತು ಸಂಸ್ಕರಣಾ ಸೌಲಭ್ಯಗಳನ್ನು ಒದಗಿಸುವ ಮೂಲಕ ತ್ಯಾಜ್ಯ ನೀರಿನಿಂದ ಭೂಮಿ ಮತ್ತು ನೀರಿನ ಸಂಪನ್ಮೂಲಗಳು ಕಲುಷಿತಗೊಳ್ಳದಿರುವುದನ್ನು ಖಾತ್ರಿ ಪಡಿಸತಕ್ಕದ್ದು.

## V . ರಾಜ್ಯ ನೀತಿಗೆ ಮಾರ್ಗದರ್ಶಿ ಸಿದ್ಧಾಂತಗಳು

ಕರ್ನಾಟಕ ರಾಜ್ಯವು ಗ್ರಾಮೀಣ ಪ್ರದೇಶಗಳಲ್ಲಿ ನೈರ್ಮಲ್ಯ ಮತ್ತು ಘನ ಮತ್ತು ದ್ರವ ತ್ಯಾಜ್ಯ ನಿರ್ವಹಣೆಯನ್ನು ಕೆಳಕಂಡ ಮಾರ್ಗದರ್ಶಿ ಸಿದ್ಧಾಂತಗಳ ಆಧಾರದ ಮೇಲೆ ಸಾಧಿಸುತ್ತದೆ:

4.1. ಎಲ್ಲಾ ನಿವಾಸಿಗಳೂ ಸಹ ವೈಯಕ್ತಿಕ ಅಥವಾ ಸಮುದಾಯ ಶೌಚಾಲಯಗಳನ್ನು ಹೊಂದಿರತಕ್ಕದ್ದು ಮತ್ತು ಇಂತಹ ಶೌಚಾಲಯಗಳು ನೀರು ಪೂರೈಕೆ ಮತ್ತು ವೈಜ್ಞಾನಿಕವಾಗಿ ಅಭಿವೃದ್ಧಿ ಪಡಿಸಲಾದ ನಿಯಂತ್ರಕ ವ್ಯವಸ್ಥೆಯಡಿಯಲ್ಲಿ ವಿನ್ಯಾಸಗೊಳಿಸಿರತಕ್ಕದ್ದು.

4.2.ಸಮಗ್ರ ಸಮುದಾಯವು ವೈಯಕ್ತಿಕ ಸ್ವಚ್ಛತೆ, ಕೈತೊಳೆಯುವ ಸುರಕ್ಷಿತ ವಿಧಾನ ಹಾಗೂ ಪರಿಸರಸ್ನೇಹಿ ಸುಸ್ಥಿರ ನೈರ್ಮಲ್ಯ ಅಭ್ಯಾಸಗಳನ್ನು ಅನುಸರಿಸತಕ್ಕದ್ದು

4.3. ತ್ಯಾಜ್ಯೋತ್ಪಾದನೆಯನ್ನು ಕಡಿತಗೊಳಿಸಲು ಒತ್ತು ನೀಡುವುದು, ತ್ಯಾಜ್ಯದಿಂದ ಗರಿಷ್ಟ ಸಂಪನ್ಮೂಲಗಳ ಹಿಂಪಡೆಯುವಿಕೆ ಮತ್ತು ಯಾವುದೇ ಸಂಸ್ಕರಣೆ ರಹಿತವಾಗಿ ವಿಲೇವಾರಿ ಮಾಡಲಾಗುವ ತ್ಯಾಜ್ಯದ ಪ್ರಮಾಣದಲ್ಲಿ ಕುಂಠಿತವಾಗುವುದು.

4.4. ಪ್ರತಿ ವರ್ಷವೂ ಘನ ಮತ್ತು ದ್ರವ ತ್ಯಾಜ್ಯ ನಿರ್ವಹಣಾ ಸೇವೆಯ ಉಪಬಂಧದಲ್ಲಿ ಅಂತಹ ವ್ಯವಸ್ಥೆಗೆ ಸಂಬಂಭಿಸಿದಂತೆ ಆರ್ಥಿಕ ಸ್ಥಿರತೆಯ ಅಂತಿಮ ಗುರಿಯನ್ನು ಹೊಂದಿದ್ದು ಲಾಭದಾಯಕ ಏರಿಕೆಯಾಗತಕ್ಕದ್ದು.

4.5. ಎಲ್ಲಾ ಸಾಮಾಜಿಕ ಮತ್ತು ಆರ್ಥಿಕ ಸಮೂಹಗಳಾದ ಚುನಾಯಿತ ಪ್ರತಿನಿಧಿಗಳು, ಸಮುದಾಯ ಆಧಾರಿತ ಗುಂಪುಗಳು, ಆರೋಗ್ಯ ಕಾರ್ಯಕರ್ತರು, ಗ್ರಾಮದ ಮುಖಂಡರು, ಅಂಗನವಾಡಿ ಮತ್ತು ಆಶಾ ಕಾರ್ಯಕರ್ತರು, ಅನೌಪಚಾರಿಕ ತ್ಯಾಜ್ಯ ಸಂಗ್ರಾಹಕರು, ಯುವಜನ ಸಮೂಹ, ದುರ್ಬಲ ಸಮುದಾಯಗಳು, ಎಲ್ಲರೂ ನೈರ್ಮಲ್ಯ ಹಾಗೂ ತ್ಯಾಜ್ಯ ನಿರ್ವಹಣಾ ವ್ಯವಸ್ಥೆಯಲ್ಲಿ ಸಹಯೋಗದಿಂದ ಹಾಗೂ ಸಮಾನವಾಗಿ ಭಾಗವಹಿಸತಕ್ಕದ್ದು.

4.6. ಗ್ರಾಮೀಣ ನೈರ್ಮಲ್ಯ ಹಾಗೂ ತ್ಯಾಜ್ಯ ನಿರ್ವಹಣಾ ವ್ಯವಸ್ಥೆಯ ಅನುಷ್ಠಾನಕ್ಕಾಗಿ, ಅನುದಾನ ಬಿಡುಗಡೆಗಾಗಿ, ಮೇಲ್ವಿಚಾರಣೆಗಾಗಿ ಮತ್ತು ಸಾಮರ್ಥ್ಯ ವರ್ಧನೆಗಾಗಿ ಸರ್ಕಾರದ ವಿವಿಧ ಇಲಾಖೆಗಳು ಮತ್ತು

ಏಜೆನ್ಸಿಗಳೊಂದಿಗೆ ಸಹಯೋಗ. ಗ್ರಾಮೀಣ ಪ್ರದೇಶದಲ್ಲಿ ನೈರ್ಮಲ್ಯಕ್ಕಾಗಿ ಅನ್ವಯವಾಗುವಂತಹ ಯುಕ್ತ ಯೋಜನೆಗಳ ಒಮ್ಮುಖತೆಯೂ ಇದರಲ್ಲಿ ಒಳಗೊಳ್ಳುತ್ತದೆ.

4.7. ನೈರ್ಮಲ್ಯ ಮತ್ತು ತ್ಯಾಜ್ಯ ವಿಲೇವಾರಿಯಲ್ಲಿ ಒಳಗೊಳ್ಳುವಂತಹ ಎಲ್ಲಾ ಇಲಾಖೆಗಳು, ಅಧಿಕಾರಿಗಳು ಮತ್ತು ಪಂಚಾಯತ್ ರಾಜ್ ಸಂಸ್ಥೆಗಳ ಸಾಮರ್ಥ್ಯ ವರ್ಧನೆ.

4.8. ಸಾಮಾಜಿಕ ಮತ್ತು ಆರ್ಥಿಕ ಸಮುದಾಯದ (ವಿಶೇಷವಾಗಿ ದುರ್ಬಲ ಹಾಗೂ ಅಂಚಿನಲ್ಲಿರುವ ಸಮೂಹಗಳಾದ ಗ್ರಾಮೀಣ ಪ್ರದೇಶಗಳ ಬಡಜನತೆ, ಮಹಿಳೆಯರು, ದಲಿತರು ಮತ್ತು ಆದಿವಾಸಿಗಳು) ಸ್ಥಳೀಯ ಜನರ ಆರೋಗ್ಯದಲ್ಲಿ ಒಟ್ಟಾರೆ ಸುಧಾರಣೆ, ಗ್ರಾಮೀಣ ಪರಿಸರದ ಸ್ವಚ್ಛತೆ.

4.9. ಸುರಕ್ಷಿತ ನೈರ್ಮಲ್ಯ ಮತ್ತು ತ್ಯಾಜ್ಯ ನಿರ್ವಹಣಾ ಕ್ರಮಗಳನ್ನು ಖಾತ್ರಿ ಪಡಿಸುವ ಸಲುವಾಗಿ ಹೆಚ್ಚಿನ ಮಟ್ಟದಲ್ಲಿ ಐಇಸಿ ಮತ್ತು ಬಿಸಿಸಿ ಕಾರ್ಯಚಟುವಟಿಕೆಗಳನ್ನು ಕೈಗೊಳ್ಳತಕ್ಕದ್ದು.

4.8. ಆರೋಗ್ಯಕರ ಮಾಸಿಕ ಋತುಚಕ್ರವನ್ನು ಪ್ರತಿಪಾದಿಸುವ ನಿಟ್ಟಿನಲ್ಲಿ ಲಭ್ಯವಿರುವ ಮತ್ತು ಕೈಗೆಟುಕುವ ನೈರ್ಮಲ್ಯ ಉತ್ಪನ್ನಗಳನ್ನು ಒದಗಿಸುವುದು ಹಾಗೂ ಜಾಗೃತಿ ಮೂಡಿಸುವುದು

4.9. ರಾಜ್ಯದಲ್ಲಿ ಉತ್ತಮ ಮತ್ತು ಸುಸ್ಥಿರ ತ್ಯಾಜ್ಯ ನಿರ್ವಹಣಾ ವ್ಯವಸ್ಥೆಗಳ ಒಟ್ಟಾರೆ ಮೇಲ್ವಿಚಾರಣೆ ಮತ್ತು ಸರಿಪಡಿಸುವ ಉದ್ದೇಶದಿಂದ ಪ್ರಬಲ ಮೇಲ್ವಿಚಾರಣೆ ಮತ್ತು ಮೌಲ್ಯಮಾಪನ ವ್ಯವಸ್ಥೆಯನ್ನು ಸ್ಥಾಪಿಸತಕ್ಕದ್ದು.

## V. ತ್ಯಾಜ್ಯ ನಿರ್ವಹಣೆಗಾಗಿ ಒಟ್ಟಾರೆ ಅನುಸಂಧಾನ ಮಾರ್ಗ

5.1. ವಿವಿಧ ರೀತಿಯ ಘನ ಮತ್ತು ದ್ರವ ತ್ಯಾಜ್ಯ ನಿರ್ವಹಣೆಗಾಗಿ ಈ ಕೆಳಗೆ ನೀಡಿರುವ ಅನುಸಂಧಾನ ಕ್ರಮಗಳನ್ನು ಅನುಸರಿಸತಕ್ಕದ್ದು:

i. ಸಂಸ್ಕರಿಸದ ಪರಿಣಾಮವಾಗಿ ಶೇ 80%–85% ರಷ್ಟು ತ್ಯಾಜ್ಯ ನೀರು ಕೊಳಚೆ ನೀರಾಗಿರುತ್ತದೆ (grey water) ಹಾಗೂ ಅದರಲ್ಲಿ ಕಪ್ಪು ನೀರು (Black water) ಆರೋಗ್ಯ ಮತ್ತು ಪರಿಸರಕ್ಕೆ ಹೆಚ್ಚು ಹಾನಿಕಾರಕವಾಗಿರುತ್ತದೆ. ಆದ್ದರಿಂದ, ರಾಜ್ಯ ಸರ್ಕಾರದ ಬೆಂಬಲದೊಂದಿಗೆ ಕಪ್ಪುನೀರಿನ ಸಂಗ್ರಹಣೆ, ಸಾಗಾಣಿಕೆ, ಸಂಸ್ಕರಣೆ ಮತ್ತು ವಿಲೇವಾರಿಯನ್ನು ಗ್ರಾಮ ಪಂಚಾಯತಿಗಳಿಂದ ಕೈಗೊಳ್ಳತಕ್ಕದ್ದು.

ii. ಘನ ತ್ಯಾಜ್ಯಕ್ಕೆ ಸಂಬಂಧಿಸಿದಂತೆ, ಗ್ರಾಮ ಪಂಚಾಯತಿಗಳ ದೃಷ್ಟಿಯು ಪ್ರಮುಖವಾಗಿ ಜೈವಿಕ ಅವಿಘಟಿತ (ಒಣ) ತ್ಯಾಜ್ಯದ ಸಂಗ್ರಹಣೆ ಮತ್ತು ಸಂಸ್ಕರಣೆಯತ್ತ ಕೇಂದ್ರೀಕೃತವಾಗಿರತಕ್ಕದ್ದು, ಏಕೆಂದರೆ ಅದು ಗ್ರಾಮೀಣ ಪ್ರದೇಶಗಳಲ್ಲಿ ಸಾವಯವ/ಹಸಿ ಕಸಕ್ಕಿಂತ ಹೆಚ್ಚಿನ ತೊಂದರೆಯನ್ನುಂಟು ಮಾಡುತ್ತದೆ. ಸಾವಯವ/ಹಸಿ ತ್ಯಾಜ್ಯವನ್ನು ಸಾವಯವ ಗೊಬ್ಬರವನ್ನಾಗಿ ಪರಿವರ್ತಿಸಬಹುದು ಮತ್ತು/ಅಥವಾ ಜಾನುವಾರುಗಳಿಗೆ ತ್ಯಾಜ್ಯೋತ್ಪಾದಕರಿಂದಲೇ ಮೇವಾಗಿ ನೀಡಬಹುದು.

5.2 ಗ್ರಾಮೀಣ ಪ್ರದೇಶಗಳಲ್ಲಿ ಘನ ಮತ್ತು ದ್ರವ ತ್ಯಾಜ್ಯಗಳ ನಿರ್ವಹಣೆಯು ಕೆಳಕಂಡ ಅನುಸಂಧಾನ ಕ್ರಮದ ಆಧಾರದ ಮೇಲೆ ಆಗತಕ್ಕದ್ದು:

i. ವಿಕೇಂದ್ರೀಕರಣದ ಆಧಾರದ ಮೇಲೆ ನೈರ್ಮಲ್ಯ ಮತ್ತು ತ್ಯಾಜ್ಯ ನಿರ್ವಹಣಾ ಮೂಲಭೂತ ಸೌಕರ್ಯ ಮತ್ತು ಸೇವೆಗಳ ಪ್ರಮುಖ ಹೊಣೆಗಾರಿಕೆಯು ಗ್ರಾಮ ಪಂಚಾಯತಿಗಳಲ್ಲಿ ನಿಹಿತವಾಗಿರತಕ್ಕದ್ದು.

ii. ಗೃಹ ತ್ಯಾಜ್ಯೋತ್ಪಾದಕರುಗಳು ಅವರುಗಳ ತ್ಯಾಜ್ಯವನ್ನು (ದ್ರವ ಮತ್ತು ಘನ) ಕಡಿಮೆ ಮಾಡುವ ಹಾಗೂ ಮೂಲದಲ್ಲಿಯೇ ವಿಂಗಡಿಸುವ ಪ್ರಮುಖ ಜವಾಬ್ದಾರಿಯನ್ನು ಹೊಂದಿರತಕ್ಕದ್ದು.

iii. ತ್ಯಾಜ್ಯ ಸಂಸ್ಕರಣೆ/ಸಂಸ್ಕರಣಾ ಪರಿಹಾರೋಪಾಯಗಳಿಗೆ ಸಂಬಂಧಿಸಿದಂತೆ, ಕರ್ನಾಟಕ ರಾಜ್ಯವು ಕೆಳಕಂಡ ಅನುಸಂಧಾನ ಕ್ರಮಗಳನ್ನು ಅಳವಡಿಸಿಕೊಳ್ಳತಕ್ಕದ್ದು:

(ಅ) ಸಾಧ್ಯವಾದ ಮಟ್ಟಿಗೆ, ಕೇಂದ್ರೀಕೃತ ವ್ಯವಸ್ಥೆಯ ಬದಲಿಗೆ ವಿಕೇಂದ್ರೀಕೃತ ವ್ಯವಸ್ಥೆಗೆ ಆದ್ಯತೆಯನ್ನು ನೀಡತಕ್ಕದ್ದು.

(ಆ) ನಿರ್ವಹಿಸಲು ಸುಲಭವಾಗಿರುವಂತಹ ಕನಿಷ್ಠ ಚಾಲನಾ ಮತ್ತು ನಿರ್ವಹಣಾ ವೆಚ್ಚವನ್ನೊಳಗೊಂಡಿರುವ ತಂತ್ರಜ್ಞಾನವನ್ನು ಆಯ್ಕೆ ಮಾಡಿಕೊಳ್ಳತಕ್ಕದ್ದು.

(ಇ) ಉತ್ತಮ ಮರುಬಳಕೆ/ಪುನರಾವರ್ತನಾ ಸಂಸ್ಕರಣಾ ಸಂಭವಿಕೆಗಳನ್ನು ಆಯ್ಕೆ ಮಾಡಿಕೊಳ್ಳತಕ್ಕದ್ದು.

iv. ತ್ಯಾಜ್ಯ ನಿರ್ವಹಣಾ ವ್ಯವಸ್ಥೆಗಳು ಕಾಲಾನುಕ್ರಮದಲ್ಲಿ ಸ್ವಯಂ ಸುಸ್ಥಿರಗೊಳ್ಳುವುದು ಕಷ್ಟ. ಗ್ರಾಮ ಪಂಚಾಯತಿಗಳು ಕಡ್ಡಾಯವಾಗಿ ತಮ್ಮ ಪೂರ್ಣ ಆಯವ್ಯಯದ ಪೈಕಿ ಶೇ 10 % ರಷ್ಟನ್ನು ನೈರ್ಮಲ್ಯ ಮತ್ತು ಘನ ಮತ್ತು ದ್ರವ ತ್ಯಾಜ್ಯ ನಿರ್ವಹಣಾ ವ್ಯವಸ್ಥೆಗಳಿಗೆ ಮೀಸಲಾಗಿಡತಕ್ಕದ್ದು. ಮುಂದುವರೆದು, 'ಮಾಲಿನ್ಯಕಾರನು ಪಾವತಿಸುತ್ತಾನೆ' (Polluter pays) ಎಂಬ ಸುಸ್ಥಿರವಾದ ಸಿದ್ಧಾಂತದನ್ವಯ, ತ್ಯಾಜ್ಯ ನಿರ್ವಹಣಾ ಸೇವಗಳಿಗೆ ಸಂಬಂಧಿಸಿದಂತೆ ಎಲ್ಲಾ ತ್ಯಾಜ್ಯೋತ್ಪಾದಕರುಗಳಿಗೆ, ಬಳಕೆದಾರರ ಶುಲ್ಕವನ್ನು ಸಮಾನ ದರಗಳ ಆಧಾರದ ಮೇಲೆ ವಿಧಿಸತಕ್ಕದ್ದು, ಮತ್ತು ಇದನ್ನು ಎಸ್ಎಲ್ಡಬ್ಲ್ಯೂಎಂ ವ್ಯವಸ್ಥೆಯಡಿಯಲ್ಲಿ ಕಾರ್ಯಾಚರಣಾ ವೆಚ್ಚವಾಗಿ ಬಳಕೆ ಮಾಡಬಹುದು.

v. ತ್ಯಾಜ್ಯ ನಿರ್ವಹಣಾ ಯೋಜನೆಯು ಸ್ಥಳೀಯ ಪರಿಸ್ಥಿತಿಗಳಾದ ಜನಸಾಂದ್ರತೆ (Density of Population), ಭೌಗೋಳಿಕ-ಹವಾಮಾನ ಪರಿಸ್ಥಿತಿ ಇತ್ಯಾದಿಗಳ ಮತ್ತು ಪರಿಹಾರಾತ್ಮಕ ಕ್ರಮಗಳ ಕಾರ್ಯಾಚರಣೆಯ ಸಾಮರ್ಥ್ಯದ ಆಧಾರದ ಮೇಲೆ ಅನುಷ್ಠಾನದಲ್ಲಿರುತ್ತದೆ.

-------